**ಕರ್ನಾಟಕ ಸರ್ಕಾರ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಮ್ಎಫ್‌ಸಿ ನ್ಯಾಯಾಲಯ, ದೇವನಹಳ್ಳಿ**

**ಸಿಸಿ ನಂ. 12/2005**

| | | |
|---|---|---|
| ಹೆಸರು | : | ಸಿದ್ದಪ್ಪ |
| ತಂದೆ ಹೆಸರು | : | ಗಂಗಪ್ಪ |
| ವಯಸ್ಸು | : | 46 |
| ಉದ್ಯೋಗ | : | ವ್ಯವಸಾಯ |
| ವಾಸ | : | ದೇವನಹಳ್ಳಿ |

**CW-3, PW-4**

**ದಂ.ಪ್ರ.ಸ ಕಲಂ.299 ಅಡಿಯಲ್ಲಿ ಸಾಕ್ಷಿ ವಿಚಾರಣೆ**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿಃ 27.09.2024**

**ಮುಖ್ಯ ವಿಚಾರಣೆ ಃ ಎಪಿಪಿಯವರಿಂದಃ**

ಸಾಕ್ಷಿಗೆ ಈಗ ನಿಪಿ-1 ನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಕಾರಣ, ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಪೋಲಿಸ್ ಠಾಣೆಯಲ್ಲಿ ಸುಮಾರು 20 ವರ್ಷಗಳ ಹಿಂದೆ ಮಾಡಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮದಲ್ಲಿ ಯಾವುದೇ ವಸ್ತುಗಳನ್ನು ಸ್ವಾಧೀನ ಪಡಿಸಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ವಿನಂತಿಸಿದ್ದು, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ದಿಃ 14.11.2004 ರಂದು ಪೋಲೀಸರು ನನ್ನನ್ನು ದಾಳಿಗೆ ಬರಬೇಕು ಎಂದು ಕೋರಿದ್ದರು ಎಂದರೆ ಸರಿಯಲ್ಲ. ಅದರಂತೆ ನಾವು ರಿಡ್ಜ್ ಹೋಟೆಲ್ ಗೆ ಹೋಗಿದ್ದೆವು ಎಂದರೆ ಸರಿಯಲ್ಲ. ಸದರಿ ಹೋಟೆಲ್ ನಲ್ಲಿ ಅಕ್ರಮವಾಗಿ ವೇಶ್ಯಾವಾಟಿಕೆಯಲ್ಲಿ ತೊಡಗಿದ್ದ ವ್ಯಕ್ತಿಗಳ ಮೇಲೆ ದಾಳಿ ಮಾಡಿದೆವು ಎಂದರೆ ಸರಿಯಲ್ಲ. ಅದರಂತೆ ಕೊಠಡಿ ಸಂಖ್ಯೆ.1 ರ ಬಾಗಿಲನ್ನು ತೆಗೆದು ನೋಡಿದಾಗ ಒಬ್ಬ ಹೆಣ್ಣು ಮಗಳು ಅರ ಬೆತ್ತಲೆಯಾಗಿ ಮಲಗಿದ್ದರು ಎಂದರೆ ಸರಿಯಲ್ಲ. ಅದೇ ರೀತಿ ಒಬ್ಬ ಗಂಡಸು ಅಂಡರ್ ವೇರ್ ನಲ್ಲಿ ಮಲಗಿದ್ದರು ಎಂದರೆ ಸರಿಯಲ್ಲ. ಆ ಇಬ್ಬರು ವ್ಯಕ್ತಿಗಳನ್ನು ಪೋಲಿಸರು ವಶಕ್ಕೆ

ಪಡೆದುಕೊಂಡರು ಎಂದರೆ ಸರಿಯಲ್ಲ. ನಂತರ ರೂಂ ನಂ.2 ಕ್ಕೆ ಹೋಗಿ ನೋಡಿದಾಗ ಅಲ್ಲಿಯೂ ಸಹ ಒಬ್ಬ ಗಂಡಸು ಮತ್ತು ಹೆಂಗಸು ಇದ್ದರು ಎಂದರೆ ಸರಿಯಲ್ಲ. ಅದೇ ರೀತಿ ಎಲ್ಲಾ ರೂಂಗಳನ್ನು ಪರಿಶೀಲಿಸಿದಾಗ ಎಲ್ಲಾ ರೂಂಗಳಲ್ಲಿ ಒಬ್ಬ ಗಂಡಸು ಮತ್ತು ಹೆಂಗಸು ಬೆತ್ತಲೆಯಾಗಿ ಇದ್ದರು ಎಂದರೆ ಸರಿಯಲ್ಲ. ನಂತರ ಅವರನ್ನು ವಿಚಾರಿಸಿದಾಗ ಅವರ ಬಳಿ ಒಂದು ದಿನಕ್ಕೆ 500/- ರಂತೆ ವೇಶ್ಯಾವಟಿಕೆಗೆ ಕರೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ಆ ಎಲ್ಲಾ ವಸ್ತುಗಳನ್ನು ಪೋಲಿಸರು ನಮ್ಮ ಸಮಕ್ಷಮ ಸ್ವಾದೀನ ಪಡಿಸಿಕೊಂಡರು ಎಂದರೆ ಸರಿಯಲ್ಲ. ಆ ರೀತಿ ಸ್ವಾದೀನ ಪಡಿಸಿಕೊಂಡ ಮಹಜರ್ ಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ವಿಚಾರ ನನಗೆ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕ.ಸ.ಎಂದು ಒಪ್ಪಲಾಗಿದೆ.**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ದೇವನಹಳ್ಳಿ.**